# ಶಿಕ್ಷಕತ್ವದ ಹುಡುಕಾಟದಲ್ಲಿ

**ಬಿಂದುಬೇನ್**



ಶಾಲೆಯಿಂದ ಮರಳಿ ಸ್ವಲ್ಪ ಹೊತ್ತು ವಿಶ್ರಮಿಸಲು ಮಲಗಿದಾಗ, ಯಾರೋ ಬಾಗಿಲನ್ನು ಬಡಿದರು. 5ನೇ ತರಗತಿಯ ವಿಜಯ್ ಹಾಗೂ 6ನೇ ತರಗತಿಯ ರಾಕೇಶ್ ಬಾಗಿಲಲ್ಲಿ ನಿಂತಿದ್ದರು.

ಒಳಗೆ ಬಂದು 'ಬೇನ್, ನಮಗೆ ಭಕ್ರಿ ಬೇಕು' ಎಂಬ ಬೇಡಿಕೆಯಿತ್ತರು.

'ನಾನು ಬಹಳ ಸುಸ್ತಾಗಿದ್ದೇನೆ. ದಯವಿಟ್ಟು, ಈಗ ಬೇಡ,' ಎಂದು ಉತ್ತರಿಸಿದೆ.

'ಆದರೆ ಬೇನ್, ನಾವು ನಿಮಗೆ ಸಹಾಯ ಮಾಡುತ್ತೇವೆ, ದಯವಿಟ್ಟು ಮಾಡಿ ಕೊಡಿ.' ಎಂದು ನನ್ನನ್ನು ಅಡಿಗೆ ಮನೆಗೆ ಕರೆತಂದರು.

ಭಕ್ರಿ ಮಾಡುವುದು ನನ್ನ ನೆಚ್ಚಿನ ಕೆಲಸ ಹಾಗೂ ತಿನ್ನುವುದು ಅವರ ನೆಚ್ಚಿನ ಕೆಲಸ ಎಂದು ನನಗೆ ಗೊತ್ತು. ಹೀಗೆ ಅನೇಕ ಸಲ ಆಗಿದೆ. ಈ ಕೆಲಸವನ್ನು ಒತ್ತಾಯಿಸಿ ನನ್ನಿಂದ ಮಾಡಿಸಲು ಮಕ್ಕಳಿಗೆ ಹಕ್ಕಿದೆಯೆ ಎಂದು ಯೋಚಿಸಿದೆ? ನನಗೆ ಬಹಳ ಸುಸ್ತಾಗಿದ್ದರೂ, ನಾನು ಭಕ್ರಿಯನ್ನು ಮಾಡುವಂತೆ ಒತ್ತಾಯಿಸುವ ಅಂಶ ಯಾವುದು? ಬಹುಶಃ ನನ್ನ ಶಿಕ್ಷಣದ ಸಮಯದಲ್ಲಿ ನಾನು ಪಡೆದ ತರಬೇತಿಯಿಂದಾಗಿ ಇರಬಹುದು ಅಥವಾ ನನ್ನ ಗತಕಾಲದ ಭಾಗವಾಗಿರುವ 'ನಯೀ ತಾಲೀಮ್' ಕಾರಣ ಇರಬಹುದು.

ನನ್ನ ಪ್ರಾಥಮಿಕ ಶಿಕ್ಷಣ ಹಾಗೂ ಶಿಕ್ಷಕರಿಗಾಗಿ ನೀಡುವ ವೃತ್ತಿಪರ ಶಿಕ್ಷಣವನ್ನು ನಾನು ನಯೀ ತಾಲೀಮ್ ಅನ್ನು ಅನುಸರಿಸುತ್ತಿದ್ದ ಲೋಕಭಾರತಿ ಎಂಬ ಆದ್ಯಪ್ರವರ್ತಕ ಸಂಸ್ಥೆಯಲ್ಲಿ ಪೂರೈಸಿದೆ. ನಯೀ ತಾಲೀಮ್ ನ ಪ್ರಸಿದ್ಧ ಬುನಾದಿ ಶಿಕ್ಷಣಾನಂತರದ ಶಾಲೆ ಯಾದ ಹಾಗೂ ಈಗ ಪರಂಪರೆಯ ಶಾಲೆಯಾಗಿರುವ ಅಂಬಾಲಾದ ಗ್ರಾಮ ದಕ್ಷಿಣಾಮೂರ್ತಿ ಶಾಲೆಯಲ್ಲಿ ನನ್ನ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದೆ. ವಿದ್ಯಾರ್ಥಿಯಾಗಿದ್ದಾಗಲೂ, ನನ್ನ ಓದಿಗೆ ಸಹಾಯ ನೀಡಲು ಹೆಚ್ಚಿನ ಮನೆಪಾಠಕ್ಕೆ ಹೋಗುತ್ತಿರಲಿಲ್ಲ ಅಥವಾ ಮಾರ್ಗದರ್ಶಿ ಪುಸ್ತಕಗಳಾಗಲಿ ನನ್ನ ಬಳಿ ಇರಲಿಲ್ಲ. ನಮಗೆ ಏನೇ ಸಮಸ್ಯೆಗಳಿದ್ದಲ್ಲಿ, ನಯೀ ತಾಲೀಮ್ ನ ಸಿದ್ಧಾಂತದಂತೆ ಆವರಣದಲ್ಲೇ ಇದ್ದ ಶಿಕ್ಷಕರ ಮನೆಗಳಿಗೆ ಹೋಗುತ್ತಿದ್ದೆವು, ಅವರು ಎಂದೂ ಇಲ್ಲವೆನ್ನುತ್ತಿರಲಿಲ್ಲ. 'ಶಿಕ್ಷೆ ನೀಡುವುದು' ಎಂಬ ಪದವೇ ಅವರ ನಿಘಂಟಿನಲ್ಲಿ ಇರಲಿಲ್ಲ.

ಛಾತ್ರಾಲಯ (ವಿದ್ಯಾರ್ಥಿನಿಲಯ) ದ ಜೀವನವು ನಯೀ ತಾಲೀಮ್‌ನ ಪದ್ಧತಿಯಂತೆ, ಯಾವ ಬದಲಾವಣೆಗೂ ಅವಕಾಶವಿಲ್ಲದ ಅಂಶ ಹಾಗೂ ಯಾವಾಗಲೂ ಬೇರೆಯವರೇ ನಮ್ಮ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವಂತಹ ಸಮಾಜದಲ್ಲಿ, ಹೊಸ ಪರಿಕಲ್ಪನೆಯಾದ ಪ್ರಜಾಪ್ರಭುತ್ವ ಎಂಬ ಪರಿಕಲ್ಪನೆಯನ್ನು ಕಲಿಸಿತು. ಛಾತ್ರಾಲಯ ಸಹಭಾಗಿತ್ವವನ್ನು ಉತ್ತೇಜಿಸುತ್ತಿತ್ತು.

ನಯೀ ತಾಲೀಮ್ ಆಧರಿಸಿರುವ ಅಂಶಗಳೆಂದರೆ

1. ವಸತಿ ಶಾಲೆಯಾಗಿರುವುದು
2. ಉತ್ಪಾದಕ ಕೆಲಸ ಮಾಡುವುದು ಹಾಗೂ ದುಡಿಮೆಗೆ ಘನತೆ ತಂದುಕೊಡುವುದು.
3. ಮಾತೃಭಾಷೆಯಲ್ಲಿ ಶಿಕ್ಷಣ
4. ಬಾಲಕ– ಬಾಲಕಿಯರ ಸಹಶಿಕ್ಷಣ

ವಸತಿ ಶಾಲೆಯ ಶಿಕ್ಷಣ: ನಯೀ ತಾಲೀಮ್ ನ ಮುಖ್ಯವಾದ ಭಾಗವೆಂದರೆ 'ದೈನಂದಿನ ವೇಳಾಪಟ್ಟಿ', ಇದನ್ನು ಎರಡು ಭಾಗಗಳಲ್ಲಿ ವಿಭಜಿಸಲಾಗಿರುತ್ತಿತ್ತು. ಮೊದಲನೆಯ ಭಾಗ 3 ಘಂಟೆಗಳು (ಬೆಳಗ್ಗೆ 7 ರಿಂದ 10 ರ ತನಕ ) ಹಾಗೂ ಎರಡನೆಯದು ಮಧ್ಯಾಹ್ನ 2 ರಿಂದ 5 ರ ವರೆಗೆ. ಈ ಆರು ಘಂಟೆಗಳ ಸಿದ್ಧಾಂತಗಳಿಗೆ ಪೂರಕವಾಗಿ ಛಾತ್ರಾಲಯದಲ್ಲಿ ಕೆಲಸ, ಆಟ, ಪ್ರಾರ್ಥನೆ ಹಾಗೂ ಇನ್ನೂ ಹಲವಾರು ಚಟುವಟಿಕೆಗಳು ದೈನಂದಿನ ಕಲಿಕೆಯನ್ನು ಮನದಟ್ಟಾಗುವಂತೆ ಮಾಡುತ್ತಿದ್ದವು.

ಲೋಕಭಾರತಿಯಲ್ಲಿ, ಹಬ್ಬಗಳಂದು ಸಾಮಾನ್ಯವಾಗಿ ರಜವಿರುತ್ತಿತ್ತು, ಎಲ್ಲ ಹಬ್ಬಗಳನ್ನು ಆಚರಿಸುತ್ತಿದ್ದರಿಂದ ಬಹಳ ಮಜವಿರುತ್ತಿತ್ತು. ಉತ್ತರಾಯಣದಂದು (ಮಕರ ಸಂಕ್ರಾಂತಿಯಂದು) ಶಾಲೆಯ ವತಿಯಿಂದ ಕೊಡುತ್ತಿದ್ದ ಕಬ್ಬನ್ನು ತಿಂದು ಆನಂದಿಸುತ್ತಿದ್ದೆವು. ರಕ್ಷಾಬಂಧನದಂದೂ ಹಾಗೆಯೇ ಆಗುತ್ತಿತ್ತು. ಹಬ್ಬಗಳು ಜಾನಪದ ಸಂಗೀತ ಹಾಗೂ ನೃತ್ಯದಿಂದ ಕೂಡಿದ್ದು ನಿಜವಾದ ಅರ್ಥದಲ್ಲಿ ಪವಿತ್ರ ದಿನವಾಗಿರುತ್ತಿದ್ದವು. ಇದೆಲ್ಲವೂ ಸಾಧ್ಯವಾಗಿದ್ದು, ಅದೊಂದು ವಸತಿ ಶಾಲೆಯಾಗಿದ್ದರಿಂದಲೇ.

ವಸತಿ ಶಾಲೆಯಲ್ಲಿ ನಮಗೆ 'ಪೋಷಕ'ರಿದ್ದರು. ನನ್ನ ವಸತಿನಿಲಯದ ಜೀವನದಲ್ಲಿ, ನಮ್ಮ ನಿಜವಾದ ಪೋಷಕರ

ನಂತರದ ಸ್ಥಾನವನ್ನು ಅರುಣಬೇನ್ ಹಾಗೂ ರಘುಭಾಯಿ ಅವರು ಪೋಷಕರಾಗಿ ತುಂಬಿದ್ದರು ಹಾಗೂ ನಮ್ಮಬಗ್ಗೆ ಬಹಳ ಕಾಳಜಿ ತೋರುತ್ತಿದ್ದರು. ನಮ್ಮ ಮೋಜಿನಲ್ಲಿ ಪಾಲ್ಗೊಂಡರೂ, ನಮ್ಮ ನಡವಳಿಕೆಯನ್ನು ಗಮನಿಸುತ್ತಾ ನಮ್ಮ ಸುಧಾರಣೆಗೆ ಸಹಾಯ ಮಾಡಿದರು. ನಮಗೆ ಮೋಜು ಮಾಡಲು ಅವಕಾಶ ಕೊಟ್ಟರೂ, ನಮ್ಮ ರಕ್ಷಕರಾಗಿ ಯಾವಾಗಲೂ ಎಚ್ಚರಿಕೆಯಿಂದ ಇರುತ್ತಿದ್ದರು. ಒಮ್ಮೆ ನಾನು ಒಂದು ಕಿರು ಪರೀಕ್ಷೆಯಲ್ಲಿ ಅನುತ್ತೀರ್ಣಳಾದೆ. ಆಗ ರಘುಭಾಯಿ ನನಗೆ ಪಾಠ ಮಾಡಿದರು ಹಾಗೂ ನಾನು ಪೂರ್ಣ ಅಂಕಗಳನ್ನು ಗಳಿಸಿದಾಗ ಅವರು ನನಗಿಂತಲೂ ಹೆಚ್ಚು ಸಂತೋಷಪಟ್ಟರು.

ನಾವು ಸಹಭಾಗಿತ್ವದಲ್ಲಿ ಮಾಡಿದ ಕೆಲವು ಅತ್ಯಂತ ಆಸಕ್ತಿದಾಯಕ ಕೆಲಸಗಳ ಬಗ್ಗೆ ಹೇಳಲು ಬಯಸುತ್ತೇನೆ. ಒಂದು ಖಜಾನಾನಿ 'ಶೋಧ' ಅಥವಾ ನಿಧಿಯ ಹುಡುಕಾಟ ಹಾಗೂ ಮತ್ತೊಂದು ಸಮುದಾಯದೊಂದಿಗೆ ಊಟ ಅಥವಾ ಸಮೂಹ ಭೋಜನ. ಈ ತರಹದ ಚಟುವಟಿಕೆಗಳು ನಾವು ಸಮುದಾಯದಲ್ಲಿ ಒಬ್ಬರು ಎಂಬ ಭಾವನೆಗಳನ್ನು ಹೆಚ್ಚಿಸುತ್ತ, ಸಮಾಜದ ಅಭಿವೃದ್ಧಿಯೆಡೆಗೆ ಕರೆದೊಯ್ಯುತ್ತಿದ್ದವು. ನಿಧಿ ಶೋಧಕ್ಕಾಗಿ ಗುಡ್ಡಗಾಡುಗಳಂದ ಕೂಡಿದ ಕೆಲವೊಮ್ಮೆ 9 ರಿಂದ 10 ಕಿಲೋಮೀಟರ್ ವರೆಗೂ ಬಹಳ ವಿಸ್ತಾರವಾದ ಜಾಗದಲ್ಲಿ ಶೋಧನೆ ನಡೆಸಬೇಕಿತ್ತು ಹಾಗೂ ಕೆಲವೊಮ್ಮೆ ಅರ್ಧ ದಿನದಷ್ಟು ಸಮಯ ಹಿಡಿಯುತ್ತಿತ್ತು. ಹಿಂತಿರುಗಿದಾಗ, ಮಧ್ಯಾನದ ಊಟ ಕಾಯುತ್ತಿರುತ್ತಿತ್ತು. ಶಿಕ್ಷಕರೊಂದಿಗೆ ಊಟ ಮಾಡುತ್ತಿದ್ದೆವು.

ಸ್ವಯಂ-ಪಾಕ ತಯಾರಿಕೆಯಲ್ಲಿ ಬೆಳಗಿನ ತಿಂಡಿ, ಮಧ್ಯಾನದ ಊಟ ಹಾಗೂ ರಾತ್ರಿಯ ಊಟವನ್ನು ತಯಾರಿಸಬೇಕಿತ್ತು. ನಮಗೆ ಸೀಮಿತವಾದ ಹಣ ಕೊಡುತ್ತಿದ್ದರಿಂದ, ಬಹಳ ಯೋಚಿಸಿ ನಮ್ಮ ಅಡುಗೆಯನ್ನು ನಾವೇ ಮಾಡಿಕೊಳ್ಳಬೇಕಾಗುತ್ತಿತ್ತು. ರಾತ್ರಿಯ ಊಟ ಎಲ್ಲ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಅವರ ಕುಟುಂಬದೊಂದಿಗೆ ಇರುತ್ತಿತ್ತು. ಎಲ್ಲರ ಭಾಗವಹಿಸುವಿಕೆ ಕಡ್ಡಾಯವಿತ್ತು ಹಾಗಾಗಿ ಇದರಿಂದ ಊಟದ ರುಚಿ ಇನ್ನಷ್ಟು ಹೆಚ್ಚುತ್ತಿತ್ತು. ಇಂದು ನಮಗೆ ಅದೊಂದು ಸಾಮಾಜಿಕ ಬೆಳವಣಿಗೆಯ ಪ್ರಕ್ರಿಯೆಯಾಗಿತ್ತು ಎಂದು ಗೊತ್ತಾಗಿದೆ. ನಯೀ ತಾಲೀಮ್ ಬರೀ ತರಬೇತಿಯಲ್ಲ, ಇದೊಂದು ಪೌರತ್ವವನ್ನು ಸಾಧಿಸಲು ಬೇಕಾದ ಸಾಮರ್ಥ್ಯದ ಅಭಿವೃದ್ಧಿ.

ಇಂದು ನಮ್ಮ ಶಾಲೆಗಳು ಪರೀಕ್ಷಾ-ಆಧಾರಿತ ಶಾಲೆಗಳಾಗಿವೆಯೆ ಹೊರತು ಜೀವನ-ಆಧಾರಿತ ಶಾಲೆಗಳಾಗಿಲ್ಲ. ನನ್ನ ಶಾಲೆಯು ಪರೀಕ್ಷಾ-ಆಧಾರಿತವಾಗಿಲ್ಲದಿದ್ದರು, ನಾವು ಪರೀಕ್ಷೆಯ ಬಗ್ಗೆ ಬಹಳ ಶ್ರದ್ಧೆ ವಹಿಸುತ್ತಿದ್ದೆವು. ಏಕೆಂದರೆ ನಮ್ಮ ಕಲಿಕೆಯು ಜೀವನದಲ್ಲಿ ಅಳವಡಿಸಿಕೊಳ್ಳುವಂತಹುದು ಆಗಿರುತ್ತಿತ್ತು, ಪಠ್ಯಕ್ರಮಕ್ಕಷ್ಟೇ ಅಲ್ಲ. ನಮ್ಮ ಪಾಠಗಳನ್ನು, ಸಪೋಟ ಅಥವಾ ಮಾವಿನ ಗಿಡದ ಕೆಳಗೆ ಕೂತು ಪುನರ್ ಮನನಮಾಡಿಕೊಳ್ಳುತ್ತದ್ದೆವು, ಬಹಳ ಶ್ರದ್ದೆಯಿಂದ ಪರೀಕ್ಷೆಗೆ ತಯಾರಾಗುತ್ತಿದ್ದೆವು. ಊಟಕ್ಕಾಗಿ ಮಾತ್ರ ಹಿಂದಿರುಗಿ ಹೋಗುತ್ತಿದ್ದೆವು. ನಮ್ಮ ಹಿರಿಯ ವಿದ್ಯಾರ್ಥಿಗಳು ವಾಚಾಳಿಗಳಿಗೆ ಕಟ್ಟುನಿಟ್ಟಾಗಿ ಎಚ್ಚರಿಸುತ್ತಿದ್ದರು ಹಾಗೂ ಬೆಳಗ್ಗೆ ಬೇಗನೆ ನಮ್ಮನ್ನು ಎಬ್ಬಿಸುತ್ತಿದ್ದರು. ಅಲ್ಲಿ 'ಶಿಕ್ಷಕರು' ಎನ್ನುವವರು ಇರಲಿಲ್ಲ – ಎಲ್ಲವನ್ನೂ ನಾವೇ ಮಾಡುತ್ತಿದ್ದೆವು.

ಪರೀಕ್ಷೆಯ ದಿನಗಳಂದು, ಶಾಲೆಯ ಆವರಣದಲ್ಲಿ ಇರುವ ಯಾವುದೇ ಕೊಠಡಿಯಲ್ಲಿ ಎಲ್ಲಿ ಬೇಕಾದರೂ ಕುಳಿತುಕೊಳ್ಳುವ ಸ್ವಾತಂತ್ರ್ಯ ನಮಗಿತ್ತು. ನಮಗೆ ಪ್ರಶ್ನೆ ಅರ್ಥವಾಗದಿದ್ದರೆ, ಕೇಳಬಹುದಿತ್ತು. ಬೇಸಿಗೆಯಲ್ಲಿ ನಡೆಯುತ್ತಿದ್ದ ವಾರ್ಷಿಕ ಪರೀಕ್ಷೆಯ ಸಮಯದಲ್ಲಿ, ಹಿರಿಯ ವಿದ್ಯಾರ್ಥಿಗಳು ಸ್ವಂತ ಅಣ್ಣಂದಿರು ಹಾಗೂ ಅಕ್ಕಂದಿರಂತೆ ಬಹಳ ಪ್ರೀತಿಯಿಂದ ನಮಗೆ ಐಸ್ ಹಾಕಿದ ತಂಪು ನಿಂಬೆ ಪಾನಕವನ್ನೋ ಅಥವಾ ಸೋಂಪಿನ ಪಾನಕವನ್ನೋ ತಂದು ಕೊಡುತ್ತಿದ್ದರು.

ಇಂಥ ಅದ್ಭುತವಾದ ಶಿಕ್ಷಣವನ್ನು ಪಡೆದ ನಂತರ, 1989 ರಲ್ಲಿ ನಾನು ಶಿಕ್ಷಕಿಯಾದೆ. ನನ್ನ ಬೋಧನಾ ಜೀವನದ ಮೊದಲ 12 ವರ್ಷಗಳನ್ನು ಗುಜರಾತ್‌ನ ಭಾವನಗರ ಜಿಲ್ಲೆಯಲ್ಲಿ ನಿರ್ವಹಿಸಿದೆ. ನಾನು ಮಕ್ಕಳಿಗೆ ಸ್ವಂತ ಮಕ್ಕಳಿಗೆ ನೀಡುವಂತೆ ಯಾವಾಗಲೂ ಪ್ರೀತಿ ಹಾಗೂ ಬೆಂಬಲವನ್ನು ಕೊಡಲು ಪ್ರಯತ್ನಿಸುತ್ತೇನೆ, ನನ್ನ 'ಕುಟುಂಬ'ದಿಂದ ನನಗೆ ಸಿಕ್ಕಿದ್ದೆಲ್ಲವನ್ನು, ನನ್ನ ವಿದ್ಯಾರ್ಥಿಗಳಿಗೂ ನಾನು ಕೊಡಬೇಕು ಎಂದು ನನಗೆ ಅನಿಸಿತು. 12 ವರ್ಷದ ಶಿಕ್ಷಣದ ನಂತರ ನಾನು ಸಂಪೂರ್ಣ/ ಸಮಗ್ರ ಶಿಕ್ಷಣವನ್ನು ಕೊಡಬೇಕೆಂದರೆ, ಮತ್ತು ಶಿಕ್ಷಣವನ್ನು ಒಂದು ಜೀವನದುದ್ದಕ್ಕೂ ನಡೆಯಬೇಕಾದ ಪ್ರಕ್ರಿಯೆಮಾಡಬೇಕಾದರೆ, ನಾನು ಹಾಗೂ ನನ್ನ ವಿದ್ಯಾರ್ಥಿಗಳು ಒಟ್ಟಿಗೆ ವಾಸಿಸಬೇಕು ಎಂದು ಮನಗಂಡೆನು.

ಮದುವೆಯ ನಂತರ, 300 ಜನರಿರುವ ಒಂದು ಪುಟ್ಟ ಹಳ್ಳಿಯಾದ ರಾಜಪುರದ ಶಾಲೆಗೆ ಸೇರಿದೆ. ಆರಂಭದಲ್ಲಿ ದಿನವೂ 23 ಕಿ.ಮೀ ಪ್ರಯಾಣಿಸುತ್ತಿದ್ದೆ. ಸರಿಯಾದ ನೈರ್ಮಲ್ಯ ಸೌಲಭ್ಯಗಳು ಇರದ ಕಾರಣ, ನಾನು ಹಳ್ಳಿಯಲ್ಲೇ ಹೋಗಿ ಇರುವ ಇರಾದೆ ಹೊಂದಿದ್ದರೂ ಅದು ಸಾಧ್ಯವಾಗಲಿಲ್ಲ. ಈಗ ಎಲ್ಲ ಅನುಕೂಲಗಳು ಇರುವುದರಿಂದ, ನಾನು ಅಲ್ಲಿಗೆ ಹೋಗಿ ನೆಲೆಸಿದ್ದೇನೆ. ಇದರಿಂದ ನನ್ನ ಗಂಡ ತನ್ನ ಕಚೇರಿಗೆ 50 ಕಿ.ಮೀ ಪ್ರಯಾಣಿಸಬೇಕಾಗಿ ಬಂದರೂ, ನನ್ನ ಕನಸಿಗಾಗಿ ಸಂತೋಷದಿಂದಲೇ ಎಲ್ಲವನ್ನೂ ಒಪ್ಪಿಕೊಂಡಿದ್ದಾರೆ.

ರಾಜಪುರ ಪ್ರಾಥಮಿಕ ಶಾಲೆಯು ಒಂದು 'ಸಾಧಾರಣ' ಸರ್ಕಾರಿ ಪ್ರಾಥಮಿಕ ಶಾಲೆ. ವಿಶೇಷತೆ ಏನೂ ಇಲ್ಲ, ಇರುವ ವಿಶೇಷತೆಯೆಂದರೆ ನಯೀ ತಾಲೀಮ್ ನ ವಿದ್ಯಾರ್ಥಿಯಾದ ನಾನು ಅದರ ತತ್ವಗಳನ್ನು ಇಲ್ಲಿ ಅಳವಡಿಸಲು ಪ್ರಾರಂಭಿಸಿದ್ದೇನೆ. ನಮಗೆ ಹಳ್ಳಿಯ ಪರಿಚಯ ಚೆನ್ನಾಗಿದೆ. ಇಲ್ಲಿ ಮೂಢ ನಂಬಿಕೆಯಿದೆ, ಕುಡಿತ ಹಾಗೂ ಇನ್ನೂ ಹಲವಾರು ಕೆಟ್ಟ ಅಭ್ಯಾಸಗಳಿವೆ. ಹಾಗಾಗಿ ಮೂಲಭೂತ ಅಡಿಪಾಯವನ್ನು ಹಾಕುವ ಜಾಗ ಶಾಲೆಯೇ ಎಂದು, ಹಳ್ಳಿಯ ಸುಧಾರಣಾ

ಕೆಲಸವನ್ನು ಶಾಲೆಯಿಂದಲೇ ಆರಂಭಿಸಬೇಕೆಂದು ಯೋಚಿಸಿದೆನು. ಬಹಳಷ್ಟು ಜನ ಹಳ್ಳಿಗರಲ್ಲಿ ಇದ್ದಂತಹ ಒಂದು ನಂಬಿಕೆಯೆಂದರೆ, ಯಾರಾದರೂ ಹುಷಾರು ತಪ್ಪಿದರೆ, ಅವನು/ಅವಳು ದೇವರಲ್ಲಿ ಹರಕೆ ಕಟ್ಟಿಕೊಳ್ಳಬೇಕೇ ಹೊರತು ಔಷಧಿಯನ್ನು ತೆಗೆದುಕೊಳ್ಳಬಾರದು ಎಂದು. ಮಕ್ಕಳ ಮರಣ, ಶಿಶುಗಳ ಮರಣ, ತಾಯಿಯ ಅರೋಗ್ಯ ಇವೆಲ್ಲ ಪ್ರಮುಖ ಸಮಸ್ಯೆಗಳಾಗಿದ್ದವು. ಎಮ್ಮೆಗಳೂ ಈ ರೀತಿಯ ಮೂಢನಂಭಿಕೆಯ ಕಾರಣದಿಂದ ಅಪಾಯದಲ್ಲಿದ್ದವು. ಸುಧಾರಣೆಯನ್ನು ಗ್ಲುಕೋಸ್ ಹಾಗೂ ಕೆಲವು ಹಣ್ಣುಗಳನ್ನು ಕೊಡುವುದರಿಂದ ಆರಂಭಿಸಿದೆವು. 'ದೇವರಲ್ಲಿ ಹರಕೆಯನ್ನೂ ಕಟ್ಟಿಕೊಳ್ಳೋಣ ಹಾಗೂ ಔಷಧಿಯನ್ನೂ ತೆಗೆದುಕೊಳ್ಳೋಣ' ಎಂದು ಹೇಳತೊಡಗಿದೆವು. ನಮಗೆ ಬೇಕಾದ ಫಲಿತಾಂಶ ಸಿಗತೊಡಗಿತು. ಜನರಿಗೂ ಇದರಿಂದ ಲಾಭವಾಯಿತು. ಇದರ ಜೊತೆಗೆ ಶಾಲೆಯಲ್ಲಿಯೂ ಸ್ವಚ್ಛತಾ ಕಾರ್ಯ ಮೊದಲ್ಗೊಂಡೆವು. ಉಗುರು ಕತ್ತರಿಸುವ ಸಾಧನ, ಬಾಚಣಿಗೆ, ಕೈ ಒರೆಸುವ ಚೌಕಗಳು ನಮ್ಮ ಮುಖ್ಯ ಸಾಧನಗಳಾದವು.

ಬದಲಾವಣೆ ತರುವುದು ಅಷ್ಟೇನೂ ಸುಲಭವಾಗಿರಲಿಲ್ಲ ಆದರೆ ಗೀಜುಭಾಯಿ ಬಧೇಕಾ ಅವರ ದಿವಾಸ್ವಪ್ನ(ಹಗಲುಗನಸು, ಕನ್ನಡಕ್ಕೆ: ಶ್ರೀ ಬಳೂರಗಿ. ಪ್ರಕಟಣೆ: ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ)ವನ್ನು ನೆನಪಿಸಿಕೊಂಡಾಗ, ನಮ್ಮ ಸಂದೇಶವನ್ನು ಎಲ್ಲ ಕಡೆಯೂ ಸಾರಲು ಸಾಧ್ಯವಾಯಿತು. ಅವರ ಬಟ್ಟೆಗಳನ್ನೂ ಹೊಲೆದು ಕೊಡಲು ಪ್ರಾರಂಬಿಸಿದೆವು ಹಾಗೆಯೇ ಅಂಗಿಗಳಗೆ ಗುಂಡಿಯನ್ನು ಹೇಗೆ ಹೊಲೆಯಬೇಕು ಎನ್ನುವುದನ್ನು ಹೇಳಕೊಡಲು ಆರಂಭಿಸಿದೆವು. ಶಾಲೆಯ ಆವರಣವನ್ನು ಸ್ವಚ್ಛಗೊಳಸಿ ಕೆಲವು ಗಿಡಗಳನ್ನು ನೆಟ್ಟೆವು ಹಾಗೂ ಇದಾದ 2 ವರ್ಷಗಳ ನಂತರ ಎಲ್ಲರ ಆರೋಗ್ಯ ಸುಧಾರಿಸಿತು ಹಾಗೂ ಗೈರುಹಾಜರಿಯ ಪ್ರಮಾಣ ಬಹುತೇಕ ಸೊನ್ನೆಯಾಯಿತು.

ಆ ಹಳ್ಳಿಯಲ್ಲಿ ದೇವರಿಗೆ ಮೇಕೆಗಳ ಬಲಿ ಕೊಡುವುದು ಬಹಳ ಸಾಮಾನ್ಯ. ಇಡೀ ಹಳ್ಳಿಯು ಮಾಂಸಾಹಾರಿ ಎಂದು ನನಗೆ ಗೊತ್ತಿದ್ದರೂ, ಅದರ ಬಗ್ಗೆ ನನ್ನ ಆಕ್ಷೇಪಣೆಯಿಲ್ಲದಿದ್ದರೂ, ಪ್ರಾಣಿ ಬಲಿ ಒಂದು ಮೂಢನಂಭಿಕೆ ಎಂದು ಅನಿಸಿ ನನ್ನ ಅಸಮ್ಮತಿಯನ್ನು ಸೂಚಿಸಲು ಒಂದು ದಿನದ ಉಪವಾಸ ಕೈಗೊಂಡೆ. ಹಳ್ಳಿಯ ಜನರು ಇದರಿಂದ ಆಘಾತಗೊಂಡರೂ ನನ್ನ ಪರವಾಗಿ ನಿಂತರು. ಪ್ರತ್ಯೇಕ ಮನೆಗಳವರು ಅಭ್ಯಾಸವನ್ನು ಮುಂದುವರೆಸಿದರೂ ಸಾಮೂಹಿಕ ಪ್ರಾಣಿಬಲಿ ನಿಂತಿತು. ಇನ್ನೂ ಹಲವು ಉಪವಾಸಗಳ ನಂತರ, ಪ್ರಾಣಿಗಳ ಬಲಿಕೊಡುವುದನ್ನು ಸಂಪೂರ್ಣವಾಗಿ ನಿಲ್ಲಿಸಲು ಒಪ್ಪಿ, ಈಗ ಅದರ ಬದಲಿಗೆ ಸಿಹಿಯನ್ನು ಮಾಡುತ್ತಾರೆ.

ನಾನು ಈ ರೀತಿ ಯೋಚಿಸಲು ಕಲಿಸಿದ್ದು ನಯೀ ತಾಲೀಮ್. ಈ ರೀತಿಯ ಯೋಚನಾ ಕ್ರಮ ಬಹಳಷ್ಟು ಸಂದರ್ಭಗಳಲ್ಲಿ ನನಗೆ ಸಹಾಯ ಮಾಡಿದೆ.ನಮ್ಮ ಹಳ್ಳಿಯಲ್ಲಿ ಇದ್ದಂತಹ ಹಲವಾರು ದೊಡ್ಡ ಸವಾಲುಗಳಲ್ಲಿ ಬಾಲ್ಯ ವಿವಾಹವೂ ಒಂದು. 8 ರಿಂದ 10 ವರ್ಷದ ಒಳಗಿನ ಹುಡುಗಿಗೆ ಸಾಮಾನ್ಯವಾಗಿ ಮದುವೆಮಾಡಿಬಿಡುತ್ತಿದ್ದರು, ಅವಳ ವೈವಾಹಿಕ ಜೀವನ ಆರಂಭವಾಗುತ್ತಿದ್ದುದೇನೋ ಅವಳು 14–15 ವರ್ಷದವಳಾದಾಗ. ನಮಗೆಲ್ಲ ಗೊತ್ತಿರುವಂತೆ ಬಾಲ್ಯವಿವಾಹ ಕಾನೂನಿಗೆ ವಿರುದ್ಧವೂ ಹೌದು ಹಾಗೂ ಸಣ್ಣ ವಯಸಿನವರು ಮಕ್ಕಳಗೆ ಜನ್ಮ ನೀಡುವುದು ಹಲವಾರು ಅರೋಗ್ಯ ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ. ಇದರ ಪರಿಣಾಮದಿಂದ ಮಕ್ಕಳಲ್ಲಿ ಕಲಿಕಾ ಸಮಸ್ಯೆಗಳರುವ ಮಕ್ಕಳು ಹುಟ್ಟಬಹುದು, ವಿವಾಹಬಾಹಿರ ಸಂಬಂಧಗಳು ಹಾಗೂ ಇನ್ನಿತರೆ ತೊಂದರೆಗಳು ಉದ್ಭವಿಸುತ್ತದೆಂದು ಒಬ್ಬ ಶಿಕ್ಷಕಿಯಾಗಿ ನನಗೆ ತಿಳದಿದೆ. ಉದಾಹರಣೆಗೆ, 7ನೇ ತರಗತಿ ಓದುವ ವಿದ್ಯಾರ್ಥಿನಿಯ ವಿವಾಹ ನಡೆಯಲಿದೆ ಎಂದು ತಿಳದಾಗ ನಾನು ಮಧ್ಯ ಪ್ರವೇಶಿಸಿದೆ. ಪೋಷಕರು ನನ್ನ ಮಾತಿಗೆ ಒಪ್ಪಿದರೂ, ಮದುವೆಯನ್ನು ನಿಲ್ಲಿಸಲಾಗಲಿಲ್ಲ ಏಕೆಂದರೆ ಅದೊಂದು 'ಸರಣಿ'ಯ ಭಾಗವಾಗಿತ್ತು. ಹಾಗಾಗಿ, ಆಕೆಗೆ ಮದುವೆಯಾಯಿತು ಆದರೆ ಆ ಹುಡುಗಿಯ ಅತ್ತೆ ಮಾವಂದಿರ ಬೆಂಬಲದೊಂದಿಗೆ ನಮ್ಮ ಹಳ್ಳಿಯಲ್ಲೇ 10ನೇ ತರಗತಿಯವರೆಗೆ ಉಳದಳು. ಇದೊಂದು ಏಕೈಕ ಪ್ರಕರಣವಲ್ಲ. ಇದೊಂದು ಸಾಮಾಜಿಕ ಪಿಡುಗು ಹಾಗೂ ಇಡೀ ಸಮಾಜವೇ ಒಟ್ಟಾಗಿ ಒಪ್ಪಿದಾಗ ಮಾತ್ರ ಇದರ ನಿರ್ಮೂಲನೆ ಸಾಧ್ಯ.

ಮೂಢ ನಂಬಿಕೆಗಳಲ್ಲಿ ಅವರ ವಿಶ್ವಾಸದ ಬಗ್ಗೆ ಈ ಮೊದಲೇ ಹೇಳದ್ದೇನೆ. ಉದಾಹರಣೆಗೆ, ಯಾರಾದರೂ ತಪ್ಪು ಮಾಡಿದ್ದಲ್ಲಿ, ಯಾವುದೋ ಒಂದು ದೆವ್ವ ಅವನ/ಅವಳ ಶರೀರದಲ್ಲಿ ಸೇರಿಕೊಂಡು, ಆ ದೆವ್ವವು ತಪ್ಪು ಕೆಲಸಗಳನ್ನು ಮಾಡುತ್ತಿದೆ ಎಂಬಂತೆ ಆ ವ್ಯಕ್ತಿಯು ನಟಿಸಲಾರಂಭಿಸುತ್ತಾನೆ. ಆ ವ್ಯಕ್ತಿಯನ್ನು ಒಬ್ಬ ಬುವಾ (ಭೂತ ಬಿಡಿಸುವವನು) ನ ಹತ್ತಿರ ಕರೆದುಕೊಂಡು ಹೋಗುತ್ತಾರೆ ಹಾಗೂ ಆ ಭೂತದ ಉಚ್ಚಾಟನೆಗೆ ಹಲವಾರು ಸಾಮಾನುಗಳನ್ನು ತರಲಾಗುತ್ತದೆ. ನಾವು ಇದರ ಬಗ್ಗೆ ಮಕ್ಕಳೊಡನೆ ಚರ್ಚಿಸಿದ್ದೇವೆ ಹಾಗೂ ಮಕ್ಕಳೂ ಇದರಲ್ಲಿ ನಿಜವಿಲ್ಲ ಎಂದು ಒಪ್ಪಿದ್ದಾರೆ.

ಈಗ ರಚನಾತ್ಮಕ ಕೆಲಸಗಳ ಬಗ್ಗೆ ನೋಡೋಣ. ನಮಗೆಲ್ಲ ಗೊತ್ತಿರುವಂತೆ ಇದರ ಮೂಲ ಬಡತನ ಹಾಗೂ ಯಾವುದೇ ಕುಟುಂಬದಲ್ಲಿ ಬದಲಾವಣೆ ತರಲು ಉತ್ತಮ ವ್ಯಕ್ತಿಗಳೆಂದರೆ ಅದು ಮಹಿಳೆಯರೇ. ಹಾಗಾಗಿ ಹಳ್ಳಿಯಲ್ಲಿ ನಾವು ಒಂದು ಸ್ವಸಹಾಯ ಗುಂಪು ಹಾಗೂ ವಿದ್ಯಾರ್ಥಿಗಳ ಬ್ಯಾಂಕ್ ಒಂದನ್ನು ಆರಂಭಿಸಿದ್ದೇವೆ. ಸ್ವಸಹಾಯ ಗುಂಪಿನಲ್ಲಿ 2 ಲಕ್ಷಕ್ಕೂ ಅಧಿಕ ರೂಪಾಯಿಗಳು ಇವೆ ಹಾಗೂ ವಿದ್ಯಾರ್ಥಿಗಳ ಬ್ಯಾಂಕಿನಲ್ಲಿ 1 ಲಕ್ಷಕ್ಕಿಂತ ಸ್ವಲ್ಪ ಕಡಿಮೆರೂಪಾಯಿಗಳವೆ. ಮನೆಗಳಲ್ಲಿ ಅವರ ಮಾತಿಗೆ ಬೆಲೆಯಿದೆ ಹಾಗೂ ಅವರು ಆರ್ಥಿಕವಾಗಿ ಸ್ವತಂತ್ರರಾಗಿದ್ದಾರೆ.

ಸಮಾಜದಲ್ಲಿ ಪ್ರಜಾಪ್ರಭುತ್ವ ಅತ್ಯಂತ ಮಹತ್ವದ ಸಂಗತಿ ಹಾಗೂ ಪ್ರಜಾಪ್ರಭುತ್ವದ ಬುನಾದಿ ಶಾಲೆಯಲ್ಲಿದೆ. ಶಾಲೆಯಲ್ಲಿ ವಿದ್ಯಾರ್ಥಿಗಳ ಪರಿಷತ್ತೊಂದನ್ನು ಆರಂಭಿಸಿದ್ದೇವೆ. ಪ್ರತಿ ವರ್ಷ ವಿದ್ಯಾರ್ಥಿಗಳು 6 ರಿಂದ 7 ವಿದ್ಯಾರ್ಥಿಗಳನ್ನು ಈ ಪರಿಷತ್ತಿಗೆ ಆರಿಸಬೇಕು. ಇಡೀ ಶಾಲೆಯನ್ನು ವಿದ್ಯಾರ್ಥಿಗಳೇ ನಿರ್ವಹಿಸಬೇಕು. ಶಾಲೆಯನ್ನು ಸ್ವಚ್ಛಗೊಳಿಸುವುದು, ಕುಡಿಯುವ ನೀರು, ಪ್ರಾರ್ಥನೆಯನ್ನು ಮಾಡಿಸುವುದು, ಅತಿಥಿಗಳನ್ನು ನೋಡಿಕೊಳ್ಳುವುದು, ತೋಟದ ಉಸ್ತುವಾರಿ ಹೀಗೆ ಕೆಲವು ಕೆಲಸಗಳನ್ನು ನಾವು ಶಾಲೆಯಲ್ಲಿ ಗುರುತಿಸಿದ್ದೇವೆ ಹಾಗೂ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಹೊಂದಿರುವ ವಿದ್ಯಾರ್ಥಿಗಳಿಂದಲೇ ಈ ಎಲ್ಲ ಕೆಲಸಗಳು ನಿರ್ವಹಿಸಲ್ಪಡುತ್ತವೆ. ಉದಾಹರಣೆಗೆ, ಶಾಲೆಯಲ್ಲಿ ಸಮವಸ್ತ್ರ ಇರಬೇಕೆ ಹಾಗೂ ಇದ್ದರೆ ಯಾವ ರೀತಿಯದು? ವಿದ್ಯಾರ್ಥಿಗಳ ಸಮಿತಿ ಎಂಬ ಈ ರೀತಿಯ ಪರಿಕಲ್ಪನೆ ಹಳ್ಳಿಯಲ್ಲಿ ನಮಗೆ ಬಹಳಷ್ಟು ಸಹಾಯ ಮಾಡುತ್ತಿದೆ. ನಮ್ಮ 12 ವರ್ಷಗಳ ನಿರಂತರ ಆಚರಣೆಯ ನಂತರ, ನಮ್ಮ ಹಲವಾರು ಹಳೆಯ ವಿದ್ಯಾರ್ಥಿಗಳು ವಯಸ್ಕರಾಗಿ, ಹಳ್ಳಿಯಲ್ಲಿ ನಿರ್ಧಾರ ತೆಗೆದುಕೊಳ್ಳುವ ವರಾಗಿದ್ದಾರೆ. ಅವರು ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆ ಪ್ರಜಾಪ್ರಭುತ್ವ ಕ್ರಮದ್ದಾಗಿದ್ದು, ಹಳ್ಳಿಯ ಎಲ್ಲರೂ ಅಭಿಪ್ರಾಯಗಳನ್ನು ತಿಳಿಸಬಹುದಾಗಿರುತ್ತದೆ. ಪ್ರಜಾಪ್ರಭುತ್ವದ ಒಂದು ಭಾಗವಾಗಿ, ಬಾಲ ಅದಾಲತ್ ಅಥವಾ ವಿದ್ಯಾರ್ಥಿಗಳ ನ್ಯಾಯಾಲಯ ಎಂಬ ಪರಿಕಲ್ಪನೆಯನ್ನು ಜಾರಿಗೆ ತಂದಿದ್ದೇವೆ. ಶಾಲೆ ಹಾಗೂ ಮನೆಗಳಲ್ಲಿ ಬಹಳಷ್ಟು ಸಣ್ಣ ಸಣ್ಣ ಸಂಗತಿಗಳು ಇರುತ್ತವೆ. ನಮಗೆ ಅಷ್ಟು ಬೃಹತ್ತಾಗಿ ಕಾಣದಿದ್ದರೂ ಅವರಿಗೆ ಅದು ಮುಖ್ಯವೇ. ಸಮಸ್ಯೆಗಳನ್ನು ಒಂದು ಚೀಟಿಯಲ್ಲಿ ಬರೆದು ಡಬ್ಬಿಯಲ್ಲಿ ಹಾಕಿ, ಬುಧವಾರಗಳಂದು ಪ್ರಾರ್ಥನೆಯ ಬದಲು ಬಾಲ ಅದಾಲತ್ ಸಭೆಯನ್ನು ನಡೆಸಲಾಗುತ್ತದೆ. ಇದರಲ್ಲಿ ವಿದ್ಯಾರ್ಥಿಗಳ ಸಮಿತಿಯ ಇಬ್ಬರು, ಶಾಲೆಯ ಇನ್ನಿಬ್ಬರು ವಿದ್ಯಾರ್ಥಿಗಳು ಹಾಗೂ ಒಬ್ಬ ಶಿಕ್ಷಕರು ಇರುತ್ತಾರೆ. ಮಾರ್ಗದರ್ಶನದ ಅಗತ್ಯವಿರುವ ಮಕ್ಕಳಿಗೆ ತಿಳಿಹೇಳಲು, ಇದು ನಮಗೆ ಸಹಾಯ ಮಾಡುತ್ತದೆ.

ಕೊನೆಯದಾಗಿ, ನಾನು ಹೇಳುವುದೇನೆಂದರೆ, ವಿದ್ಯಾರ್ಥಿ ನಿಲಯ ಬಳಸದ ಮನೆಯಿಂದ ಶಾಲೆಗೆ ಬರುವ ವಿದ್ಯಾರ್ಥಿಗಳು ನಯೀ ತಾಲೀಮ್ ನ ಒಂದು ಭಾಗವಾಗಿರುತ್ತಾರೆ. ಶಾಲಾ ಸಮಯದ ನಂತರ ಅವರು, ಶಾಲೆಯಲ್ಲಿ ಅಥವಾ ನಮ್ಮ ಮನೆಯಲ್ಲಿ ಇರುತ್ತಾರೆ.

ಇದು ಅವರ ಆಯ್ಕೆಯನುಸಾರ ನಡೆಯುವಂತಹುದು. ಇದು ನಮಗೂ ಸಂತಸದ ವಿಷಯವೇ!

---

**ಬಿಂದುಬೇನ್** ಅವರು ರಾಜಪುರದ ಪ್ರಾಥಮಿಕ ಶಾಲೆಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಶಾಲೆಯೊಂದಿಗೆ 1989 ರಿಂದ ಅವರ ಒಡನಾಟವಿದೆ. ಅವರು ಹುಟ್ಟಿ ಬೆಳೆದಿದ್ದೆಲ್ಲ ಲೋಕಭಾರತಿ ಸನೋಸಾರದಲ್ಲಿ. ಹತ್ತು ವರ್ಷಕ್ಕೂ ಮೇಲ್ಪಟ್ಟು ಕಾಲ, ಪಠ್ಯಪುಸ್ತಕಗಳನ್ನು ಬರೆಯುವುದು ಹಾಗೂ ಪರಿಷ್ಕರಿಸುವ ಕೆಲಸದಲ್ಲಿ ತೊಡಗಿದ್ದಾರೆ. 2006 ರಲ್ಲಿ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಯಿಂದ ಪುರಸ್ಕೃತರಾಗಿದ್ದಾರೆ (ಚಿತ್ರಕೂಟ ಪ್ರಶಸ್ತಿ). ಇತ್ತೀಚಿಗೆ, ಶಿಕ್ಷಣದ ಮೂಲಕ ಗ್ರಾಮದ ಅಭಿವೃದ್ಧಿಗೆ ಅವರ ಕೊಡುಗೆಗಾಗಿ, ವರ್ಧಾದಲ್ಲಿರುವ ನಯೀ ತಾಲೀಮ್ ಸಂಘದಿಂದ "ಮಾ – ಬಾಬಾ ಪ್ರಶಸ್ತಿ"ಯನ್ನು ನೀಡಲಾಯಿತು. parthesh.pandya@ceeindia.org ಮೂಲಕ ಅವರನ್ನು ಸಂಪರ್ಕಿಸಬಹುದು. **ಅನುವಾದಕರು**: ವಿನಯ ವಿಠಲ, **ಪರಿಶೀಲನೆ**: ಆನಂದ ಡಿ.